# ಜಾಗತಿಕ ಸಂಗೀತದ ಹೊಸ ಪ್ರವೃತ್ತಿಗಳು



**‘ಕೋವಿಡ್ 19’ರ ದೆಸೆಯಿಂದಾಗಿ ಸಂಗೀತ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ವಿಶ್ವದ ವಿವಿಧ ಭಾಗಗಳ ಕಲಾವಿದರು ಹಾಗೂ ಸಂಗೀತಪ್ರೇಮಿಗಳ ನಡುವಿನ ಸಂವಹನಕ್ಕೆ ಪ್ರಸಕ್ತ ಬಿಕ್ಕಟ್ಟು ಕಾರಣವಾಗಿದೆ. ಈ ಬೆಳವಣಿಗೆ ಸಂಗೀತಕ್ಷೇತ್ರದಲ್ಲಿ ಹೊಸ ಹೊಳಪು ಮೂಡಲು ಕಾರಣವಾಗಿದೆ.**

**■ ರೂಪಾ ಕಾಸರವಳ್ಳಿ**

ನೂರಾರು ವರ್ಷಗಳ ಹಿಂದೆ ಸಂಗೀತ ಕಾರ್ಯಕ್ರಮ ಅಥವಾ ಕಛೇರಿಗಳು ಮನೆಯ ಅಂಗಳದಲ್ಲಿ ನಡೆಯುತ್ತಿದ್ದವು. ಮುಸ್ಸಂಜೆ ಹೊತ್ತಿನಲ್ಲಿ ಎಣ್ಣೆ ದೀಪಗಳನ್ನು ಹಚ್ಚಿಕೊಂಡು, ಸುಮಾರು ನಾಲ್ಕು ಗಂಟೆಗಳ ಕಾಲ ಧ್ವನಿವರ್ಧಕಗಳ ಸಹಾಯವಿಲ್ಲದೆ ಹಾಡುತ್ತಿದ್ದರು. ಜನರು ಕೇಳಿ ಸಂತೋಷಪಡುತ್ತಿದ್ದರು. ಕ್ರಮೇಣ, ಸೌಂಡ್ ಸಿಸ್ಟಮ್ ಬಳಕೆಗೆ ಬಂತು. ರೇಡಿಯೋದಲ್ಲಿ ಸಂಗೀತ, ಸಭಾಕಾರ್ಯಕ್ರಮಗಳು ಹಾಗೂ ಸಿ.ಡಿ., ಕ್ಯಾಸೆಟ್‌ಗಳಲ್ಲಿ ಸಂಗೀತ ಕೇಳುವುದು ಜನರಿಗೆ ಅಭ್ಯಾಸವಾಯಿತು.

ಹಾಡುವವನಿಗೆ (ಕಲಾವಿದನಿಗೆ) ಪ್ರೇಕ್ಷಕರು ಬಹಳ ಮುಖ್ಯ. ಪ್ರೇಕ್ಷಕರನ್ನು ನಾವು ಮೂರು ತರಹ ವಿಭಾಗಿಸಬಹುದು. ಮೊದಲನೆಯ ಪ್ರೇಕ್ಷಕ, ಕೇವಲ ಮನರಂಜನೆಗೆ ಮಾತ್ರ ಸಂಗೀತ ಕೇಳುತ್ತಾನೆ. ಎರಡನೆಯ ವರ್ಗದ ಪ್ರೇಕ್ಷಕ ತನ್ನ ಕಲಿಕೆ ಹೆಚ್ಚಿಸಿಕೊಳ್ಳಲು ಸಂಗೀತ ಕೇಳುತ್ತಾನೆ. ಮೂರನೇ ಬಗೆಯವನು ವಿಮರ್ಶೆ ಮಾಡಲು ಸಂಗೀತ ಕೇಳುತ್ತಾನೆ.

ಇವತ್ತಿನ ಜಗತ್ತಿನಲ್ಲಿ ಸಂಗೀತ ಲೋಕ ಬಹಳ ವಿಸ್ತಾರವಾಗಿ ಬೆಳೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇಂಟರ್ನೆಟ್, ಮುಖ್ಯವಾಗಿ ‘ಯುಟ್ಯೂಬ್’ ಮೂಲಕ ನಾವು ಇವತ್ತು ಬೇರೆ ಬೇರೆ ತರದ ಸಂಗೀತವನ್ನು ಮನೆಯಲ್ಲಿಯೇ ಕುಳಿತುಕೊಂಡು ನೋಡಬಹುದಾಗಿದೆ, ಕೇಳಬಹುದಾಗಿದೆ. ಜಗತ್ತಿನ ಯಾವುದೋ ಮೂಲೆಯಲ್ಲಿ ನಡೆಯುತ್ತಿರುವ, ನಾವು ಹಿಂದೆ ಎಂದೂ ಕೇಳದ ಅರಿಯದ ಧ್ವನಿಗಳನ್ನು ಆಸ್ವಾದಿಸುತ್ತಿದ್ದೇವೆ. ಉದಾಹರಣೆಗೆ, ಸ್ಟ್ರೀಟ್ ಸಂಗೀತ, ಅಮೆರಿಕ ಸಂಗೀತ, ಪಾಶ್ಚಾತ್ಯ ಸಂಗೀತ, ಭಾರತೀಯ ಸಂಗೀತ, ಇತ್ಯಾದಿ. ‘ಯುಟ್ಯೂಬ್’ ನಿಜಕ್ಕೂ ಅದ್ಭುತ. ಒಂದು ಕ್ಲಿಕ್ ಮಾಡಿದರೆ ಸಾಕು, ಬೇಕಾದ ಆಡಿಯೋ, ವಿಡಿಯೊಗಳು ನಮ್ಮೆದುರಿಗೆ ತೆರೆದುಕೊಳ್ಳುತ್ತವೆ.

ತಂತ್ರಜ್ಞಾನದ ಮೂಲಕ ಸಂಗೀತ ಸುಲಭವಾಗಿ ದೊರೆಯುತ್ತಿರುವಾಗ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಅವುಗಳೆಂದರೆ: ಸಂಗೀತವು ಪ್ರಸ್ತುತ ಸುಲಭ ಲಭ್ಯವೆ? ಸಾಂಪ್ರದಾಯಿಕವಾದ ಸಂಗೀತ ಅಳಿಸಿಹೋಯಿತೆ? ಗ್ಲೋಬಲ್ ಸಂಗೀತವೆಂದರೇನು? ಹೀಗೆ ಅನೇಕ ಪ್ರಶ್ನೆಗಳು ನಮ್ಮನ್ನು ಕಾಡಬಹುದು. ಈ ಪ್ರಶ್ನೆಗಳೊಂದಿಗೆ, ಅಂತರ್ಜಾಲವನ್ನು ಜಾಲಾಡಿ ನೋಡಿದರೆ, ಹೊಸ ರೀತಿಯ ಪ್ರಯೋಗಗಳು ಸಂಗೀತದಲ್ಲಿ ನಡೆಯುತ್ತಿರುವುದು ತಿಳಿಯುತ್ತದೆ. ಉದಾಹರಣೆಗೆ ಮೇರು ಸಂಗೀತಗಾರರು, ಕಲಾವಿದರಾದ ಪಂಡಿತ್ ರವಿಶಂಕರ್, ಶಂಕರ್ ಮಹದೇವನ್, ಡಾ. ಎಲ್. ಸುಬ್ರಹ್ಮಣ್ಯಂ ಅವರುಗಳು ತಮ್ಮ ಸಂಗೀತದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿರುವುದನ್ನು ನಾವು ನೋಡುತ್ತಾ ಬಂದಿದ್ದೇವೆ.

ಪಂಡಿತ್ ರವಿಶಂಕರ್ ಅವರ ಮಗಳು ಅನುಷ್ಕಾ ಅವರು ತಮ್ಮ ಸಂಗೀತ ಕಾರ್ಯಕ್ರಮಗಳಲ್ಲಿ ಬೇರೆ ಬೇರೆ ವಾದ್ಯಗಳನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ, ವೈಯೋಲ, ಫ್ಲೇಮೆನ್ಕ್, ಕೆಜೊನ್, ಇತ್ಯಾದಿ.

ಈಗಿನ ಟ್ರೆಂಡ್ ಏನೆಂದರೆ, ಒಂದು ಹಿಟ್ ಪಾಪ್ ಹಾಡು ತೆಗೆದುಕೊಂಡು ಅದಕ್ಕೆ ಭಾರತೀಯ ಸಂಗೀತದ ರಸವನ್ನು ಸೇರಿಸುವುದು. ಉದಾಹರಣೆಗೆ, ಯುಟ್ಯೂಬ್‌ನಲ್ಲಿ ಬಂದ **Raga Labs** ತುಂಬಾ ಪ್ರಸಿದ್ಧವಾಯಿತು. ಇಲ್ಲಿ **Ed Sheeran** ಎಂಬುವರು **shape of you** ಎಂಬ ಸಂಗೀತದ ಕಾರ್ಯಕ್ರಮದಲ್ಲಿ ಶಾಸ್ತ್ರೀಯ ಶೈಲಿಗಳನ್ನು ತೋರಿಸಿಕೊಟ್ಟಿದ್ದರು.

ಕರ್ನಾಟಕ ಶಾಸ್ತ್ರೀಯ ಸಂಗೀತದ ಸುಪ್ರಸಿದ್ಧ ವೈಣಿಕ ವಿದೂಷಿ ಜಯಂತಿ ಕುಮರೇಶ್ ಅವರು ತಮ್ಮ **‘Cup ‘O’ Carnatic fun series’**ನಲ್ಲಿ ಈಗಿನ ಚಲನಚಿತ್ರಗಳ ಥೀಮ್‌ಗಳಿಗೆ ಪ್ರಾಚೀನ ಭಾರತೀಯ ರಾಗಗಳನ್ನು ಸಂಯೋಜಿಸಿದ್ದಾರೆ. ಜಾಗತಿಕವಾಗಿ, ವ್ಯಾಪಾರ, ವಾಣಿಜ್ಯ, ಮತ್ತು ರಾಜಕೀಯ ಜನರನ್ನು ಹೆಜ್ಜೆ ಹೆಜ್ಜೆಗೂ ಬದಲಾಯಿಸುತ್ತಿದೆ; ಹೊಸತನವನ್ನು ಸ್ವೀಕರಿಸುವ ಪ್ರವೃತ್ತಿ ಮೂಡಿಸುತ್ತಿದೆ. ಈ ಪ್ರವೃತ್ತಿಯಿಂದ ಸಂಗೀತವೂ ಹೊರತಾದುದಲ್ಲ.

ನಾನು, ಚಿಕ್ಕವಳಿದ್ದಾಗ, ಅನೇಕ ಜುಗಲ್‌ಬಂದಿ ಸಂಗೀತ ಕಾರ್ಯಕ್ರಮಗಳನ್ನು ವೀಕ್ಷಿಸಿದ್ದೆ, ಆನಂದಿಸಿದ್ದೆ. ಅದರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗು ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಮಿಲನ ಕಾರ್ಯಕ್ರಮಗಳೂ ಸೇರಿದ್ದವು. ಉದಾಹರಣೆಗೆ, ವಿದ್ವಾನ್ ಲಾಲ್‌ಗುಡಿ ಜಯರಾಮನ್ ಹಾಗೂ ಹಿಂದುಸ್ಥಾನಿ ಮೇರುಗಾಯಕ ಭೀಮ್‌ಸೇನ್ ಜೋಷಿ,